ಯಾರ ಪ್ರಾಣವನ್ನೂ ತೆಗೆಯಲಾರ' – ಬಾಲಕ ರಶೀದ ಇಷ್ಟೊತ್ತು ಅವರ ಮಾತುಗಳನ್ನು ಕೇಳಿಸಿಕೊಂಡು ಎದ್ದು ಕುಳಿತು ಹೇಳಿದ್ದ. 'ಓಹೋ ಎಂಥ ಒಳ್ಳೆಯ ಹುಡುಗ ನೀನು. ನಿನ್ನ ಪಪ್ಪಾ ಒಬ್ಬನೇ ಅಲ್ಲ, ಎಲ್ಲಾ ಸೈನಿಕರೂ, ಎಲ್ಲಾ ದೇಶದ ಸೈನಿಕರೂ ಒಳ್ಳೆಯವರೇ. ನನ್ನ ಅಣ್ಣನ ಮಗ ಕೂಡ ಸೈನ್ಯದಲ್ಲಿ ಇದ್ದಾನೆ. ಸೈನ್ಯಕ್ಕೆ ಸೇರೋದು ಬೇಡ, ಬೇಕರಿಯನ್ನು ನೋಡಿಕೊಂಡು ಇರು ಎಂದು ಎಷ್ಟು ಹೇಳಿದರೂ ಕೇಳಲಿಲ್ಲ. ಸೈನ್ಯಕ್ಕೆ ಸೇರುವ ಮೊದಲು ತುಂಬಾ ಕರುಣೆಯುಳ್ಳವನಾಗಿದ್ದ. ಆದರೆ ಇತ್ತೀಚೆಗೆ ತುಂಬಾ ಕ್ರೌರ್ಯ ತುಂಬಿಕೊಂಡಂತೆ ಕಾಣುತ್ತಿದ್ದ. ಯುದ್ಧ ಶುರುವಾದ ಬಳಿಕ ಅವನ ಬಗ್ಗೆ ಯಾವ ಸುದ್ದಿಯೂ ಇಲ್ಲ. ನಮ್ಮಣ್ಣ ಹಾಸಿಗೆ ಹಿಡಿದಿದ್ದಾನೆ. ಇಲ್ಲದಿದ್ದರೆ ನಿರಾಶ್ರಿತರ ಶಿಬಿರಕ್ಕೆ ನಮ್ಮೊಂದಿಗೆ ಕರೆದು ತರುತ್ತಿದ್ದೆವು. ನಿಜ ಹೇಳುತ್ತೇನೆ, ಸೈನ್ಯಕ್ಕೆ ಸೇರಿದ ಎಲ್ಲರ ಮನಸ್ಸಿನಿಂದ ಕರುಣೆ, ಮಾನವೀಯತೆಗಳನ್ನು ಹೊರತೆಗೆದು ಬರಿ ಕ್ರೌರ್ಯವನ್ನು ತುಂಬಲಾಗುತ್ತದೆ. ನಮ್ಮಣ್ಣ ಊಟ, ನೀರಿಲ್ಲದೆ ಪ್ರಾಣ ಬಿಟ್ಟರೂ ಬಿಡಬಹುದು. ಪ್ರಾಣಭೀತಿ ಬಂದಾಗ ಯಾರಿಗೆ ಯಾರೂ ಆತುಕೊಳ್ಳುವುದಿಲ್ಲ. ಸಾಯುವಾಗ ಪ್ರತಿಯೊಬ್ಬ ಮನುಷ್ಯ ತನ್ನ ಜೀವಮಾನದಲ್ಲಿಯೇ ಅತ್ಯಂತ ಸ್ವಾರ್ಥಿಯಾಗಿಬಿಡುತ್ತಾನೆ. ಇಂಥವುಗಳನ್ನೆಲ್ಲ ಸೃಷ್ಟಿಸಿದ ದೇವರು ನಿಜಕ್ಕೂ ಕ್ರೂರಿಯಿದ್ದಾನೆ'. ಬೇಕರಿ ಯಜಮಾನನ ಮಾತುಗಳಲ್ಲಿ ನೂರಕ್ಕೆ ನೂರು ಪಾಲು ಸತ್ಯ ಇದೆ ಅನ್ನಿಸಿತ್ತು ಹಮೀದಾಳಿಗೆ.

ಅವರೊಂದಿಗೆ ಎದ್ದು ನಿಂತವಳಿಗೆ ರಾತ್ರಿ ಎಲ್ಲಿ ಕಾಲ ಕಳೆಯಬೇಕೆಂಬ ಚಿಂತೆ ಹುಟ್ಟಿಕೊಂಡಿತು. ಮಗನನ್ನು ಭುಜದ ಮೇಲೆ ಮಲಗಿಸಿಕೊಂಡು ನಡೆಯುತ್ತಿದ್ದವಳನ್ನು ಬೇಕರಿ ಹೆಂಗಸಿನ ಗಂಡ, 'ಮಗಳೆ ಕತ್ತಲಾಗುತ್ತಿದೆ. ಕತ್ತಲೆಯ ದಾರಿ ಸದಾ ದೂರವಿರುತ್ತದೆ. ಬೇಗನೆ ಸವೆಯುವುದಿಲ್ಲ. ಇನ್ನೊಂದು ಮೈಲಿ ದೂರದ ಊರಿನಲ್ಲಿ ಅಮಾನುಲ್ಲಾ ಷರೀಫ ಎಂಬ ದೊಡ್ಡ ಜಮೀನುದಾರನಿದ್ದಾನೆ. ಹೀಗೆ ವಲಸೆ ಹೋಗುವವರಿಗೆ ಹೊಟ್ಟೆ ತುಂಬಾ ಊಟ ಮತ್ತು ತಂಗಲು ಜಾಗ ಕೊಡುತ್ತಾನಂತೆ. ಆತನ ಕುರಿ ಶೆಡ್ಡುಗಳಲ್ಲಿ ನೂರಾರು ಜನ ಮಲಗಬಹುದಂತೆ. ನೀನು ಮಗನೊಂದಿಗೆ ಬರುವುದಾದರೆ ಬಾ. ರಾತ್ರಿ ಕಳೆದು ನಾಳೆ ಪ್ರಯಾಣ ಮುಂದುವರೆಸಿದರೆ ಆಯಿತು. ರಾತ್ರಿಯ ಹೊತ್ತು ಯುದ್ಧ ಮಾಡಬಾರದೆಂಬ, ನಾಗರೀಕರು ವಾಸಿಸುವ ಜಾಗಗಳನ್ನು ಧ್ವಂಸ ಮಾಡಬಾರದೆಂಬ ನಿಯಮಗಳಿವೆ. ಆದರೆ ಈ ರಕ್ಕಾಸುರರು ಯಾವ ನಿಯಮಗಳನ್ನೂ ಪಾಲಿಸುವುದಿಲ್ಲ. ಅಸಲಿಗೆ ಯುದ್ಧವೇ ನಿಯಮಗಳಿಲ್ಲದ ಒಂದು ಕ್ರೂರ ಕ್ರಿಯೆ' ಎಂದಿದ್ದ. ಅವಳಿಗೆ ತುಂಬಾನೇ ಖುಷಿಯಾಯಿತು. 'ಅಯ್ಯೋ ದೊಡ್ಡಪ್ಪ ನಿಮ್ಮ ಉಪಕಾರವನ್ನು ಈ ಜನ್ಮದಲ್ಲಿ ಮರೆಯಲಾರೆ. ನನ್ನ ಮಗನಿಗೆ ಜ್ವರ ಕೂಡಾ ಅಂಟಿಕೊಂಡಂತಿದೆ. ನಾನೂ ನಿಮ್ಮ ಜೊತೆಯಲ್ಲಿಯೇ ಕಳೆದು ನಾಳೆ ಪ್ರಯಾಣ ಮುಂದುವರೆಸುತ್ತೇನೆ' ಎಂದು ಕೃತಜ್ಞತೆಗಳನ್ನು ಹೇಳಿದ್ದಳು.

ಅವರು ಮೈಲಿ ದೂರದ ಆ ಊರನ್ನು ತಲುಪಿದಾಗ ಪೂರ್ಣ ಕತ್ತಲು ಆವರಿಸಿತ್ತು. ಬಹುಶಃ ರಾತ್ರಿ ಎಂಟು ಗಂಟೆಯಾಗಿರಬೇಕು. ಊರು ಕತ್ತಲ ತೊಟ್ಟಿಲಿನಲ್ಲಿ ತೂಗುತ್ತಿತ್ತು. ಯುದ್ಧ ಸಮಯದಲ್ಲಿ ಬೇಕೆಂತಲೇ ಪಟ್ಟಣ ಮತ್ತು ಹಳ್ಳಿಗಳಲ್ಲಿ ರಾತ್ರಿಯ ಹೊತ್ತು ವಿದ್ಯುತ್ ತೆಗೆದುಬಿಡುತ್ತಾರೆ. ಬೆಳಕು ಕಂಡರೆ ವೈರಿಗಳು ವೈಮಾನಿಕ ದಾಳಿಯನ್ನು ನಡೆಸುವ ಸಾಧ್ಯತೆ ಜಾಸ್ತಿಯಿರುತ್ತದೆ. ಈ ಊರಿನಲ್ಲೂ ವಿದ್ಯುತ್ತನ್ನು ತೆಗೆಯಲಾಗಿತ್ತು. ಬೇಕರಿ ಯಜಮಾನ ಹೇಳಿದಂತೆ ಜಮೀನುದಾರ ಅಮಾನುಲ್ಲಾ ಷರೀಫರ ಮನೆಯ ಮುಂದೆ ನೂರಾರು ಜನ ಸೇರಿದ್ದರು. ಲಾಟೀನು ಮತ್ತು ಮೊಂಬತ್ತಿ ಬೆಳಕಲ್ಲಿ ಜನ ಶಿಸ್ತಿನಿಂದ ಕುಳಿತಿದ್ದರು. ಊಟದ ಘಮ್ಮನೆಯ ವಾಸನೆ ಯುದ್ಧ ಭಯವನ್ನು ಹೋಗಲಾಡಿಸಿ ಹಬ್ಬದ ವಾತಾವರಣವನ್ನು ನಿರ್ಮಿಸಿದಂತಿತ್ತು. ಹಮೀದಾ ಕೂಡಾ ಮಗನನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ಕೂತಳು. 'ಇನ್ನೇನು ಹತ್ತು ನಿಮಿಷ, ಊಟಕ್ಕೆ ಬಡಿಸಲಾಗುವುದು. ಊಟವಾದ ಮೇಲೆ ಹೆಂಗಸರು ಮತ್ತು ಮಕ್ಕಳು ಇಲ್ಲೇ ಹಜಾರದಲ್ಲಿ ಮಲಗಲು ವ್ಯವಸ್ಥೆಯಾಗಿದೆ. ಇನ್ನು ಗಂಡಸರಿಗೆ ಖಾಲಿ ಇರುವ ಎರಡು ಕುರಿ ಶೆಡ್ಡುಗಳಲ್ಲಿ ಮಲಗಲು ವ್ಯವಸ್ಥೆ ಮಾಡಲಾಗಿದೆ' ಎಂದು ವ್ಯಕ್ತಿಯೊಬ್ಬರು ಜನರ ಮುಂದೆ ನಿಂತು ಹೇಳಿದ್ದರು. 'ಆತ ಅಮಾನುಲ್ಲಾ ಷರೀಫರ ತಮ್ಮ. ಅಣ್ಣನಂತೆ ತಮ್ಮನೂ ಗುಣವಂತ' ಎಂದು ಪಕ್ಕದಲ್ಲಿ ಕುಳಿತಿದ್ದ ವ್ಯಕ್ತಿ ಹೇಳಿದ್ದು ಹಮೀದಾಳ ಕಿವಿ ತುಂಬಿಕೊಂಡಿತ್ತು. ಆತ ಹೇಳಿದಂತೆ ಎಲ್ಲರ ಮುಂದೆಯೂ ಎಲೆ ಹಾಕಿ, ನೀರಿನ ಗ್ಲಾಸುಗಳನ್ನು ಇಟ್ಟರು. ಲಾಟೀನು ಹಿಡಿದು ಬಂದ ಅಮಾನುಲ್ಲಾ ಷರೀಫ್ ಪಡಸಾಲೆಯಲ್ಲಿ ನಿಂತು, 'ಬಂಧುಗಳೇ ಯುದ್ಧದಿಂದಾಗಿ ಕುರಿಗಳನ್ನು ಸಾಕಲು ಕಷ್ಟ ಸಾಧ್ಯವಾಗುತ್ತಿದೆ. ಯಾವಾಗ ಕುರಿ ಶೆಡ್ಡುಗಳ ಮೇಲೆ ಶತ್ರುಗಳು ಬಾಂಬ್ ಹಾಕುತ್ತಾರೋ ಗೊತ್ತಿಲ್ಲ. ಬಾಂಬ್ ಬಿದ್ದರೆ ನಾನು ಸಾಕಿದ ಕುರಿಗಳು ವೃಥಾ ಸುಟ್ಟುಹೋಗುತ್ತವೆ. ಹಾಗಾಗಿ ಈ ಮೂರು ದಿನದಿಂದಲೂ ಕುರಿ ಕೊಯ್ದು ಮನ್ಸಾಫ್ ಊಟವನ್ನು ಹಾಕಿಸುತ್ತಿದ್ದೇನೆ. ಎಲ್ಲರೂ ಸಮಾಧಾನದಿಂದ ಊಟ ಮಾಡಿ, ಈ ರಾತ್ರಿ ಇಲ್ಲಿ ತಂಗಿದ್ದು ಬೆಳಿಗ್ಗೆ ರೊಟ್ಟಿಗಳನ್ನು ತಿಂದು ಪ್ರಯಾಣ ಬೆಳೆಸಬಹುದು. ನಿರಾಶ್ರಿತರ ಶಿಬಿರ ಇನ್ನೂ ಹದಿನೈದು ಕಿಲೋಮೀಟರ್ ದೂರವಿದೆ. ನನ್ನಲ್ಲಿರುವ ಕುರಿಗಳು ನಾಳೆಗೆ ಮುಗಿಯುತ್ತವೆ. ನಾನಂತೂ ಈ ಮನೆ, ಈ ಊರನ್ನು ಬಿಟ್ಟು ಹೋಗಲಾರೆ. ಒಂದು ವೇಳೆ ಬಾಂಬ್‌ಗಳು ಬಿದ್ದರೆ ಇಲ್ಲೇ ಪ್ರಾಣಬಿಡುತ್ತೇನೆ. ನಿನ್ನೆ ಬೆಳಿಗ್ಗೆ ಈ ಪಡಸಾಲೆಯಲ್ಲಿ ಇಟ್ಟಿದ್ದ ದೊಡ್ಡ ಟೀವಿಯನ್ನು ನನ್ನ ಕೈಯಾರೆ ಒಡೆದುಹಾಕಿದೆ. ನನ್ನ ಜೀವಮಾನದಲ್ಲಿ ನಾನೆಂದೂ ಅಂಥ ದೃಶ್ಯಗಳನ್ನು ಕಂಡಿರಲಿಲ್ಲ. ಅಟ್ಟಹಾಸದಿಂದ ಮಕ್ಕಳ ರುಂಡಗಳನ್ನು ಕತ್ತರಿಸಿ, ಹೆಂಗಸರ ದೇಹಗಳನ್ನು ಛಿದ್ರ ಮಾಡಿ ರಕ್ತಸಿಕ್ತ ಕೈಗಳೊಂದಿಗೆ ನೃತ್ಯ ಮಾಡುತ್ತಿದ್ದ ಪಿಶಾಚಿಗಳನ್ನು ನೋಡಲು ಸಾಧ್ಯವಾಗಲಿಲ್ಲ. ಅವರಿಗೆ ಮನುಷ್ಯ ರೂಪಗಳನ್ನು ಭಗವಂತ ಹೇಗೆ ಕೊಟ್ಟನೆಂಬುದನ್ನು ನಂಬಲಿಕ್ಕೆ ಸಾಧ್ಯವಾಗುತ್ತಿಲ್ಲ. ನನಗಂತೂ ಆ ದೃಶ್ಯಗಳನ್ನು ನೋಡಿ ಮಾನವ ಜಾತಿಯ ಬಗ್ಗೆಯೇ ಅಸಹ್ಯ ಹುಟ್ಟಿದೆ. ಖಂಡಿತಾ ಜಗತ್ತು ವಿನಾಶದ ಕಡೆ ಮುಖ ಮಾಡಿದೆ' ಎಂದು ಮಾತು ಮುಗಿಸುವುದರೊಳಗೆ ಎಲ್ಲರ ಎಲೆಗಳ ತುಂಬಾ ಬಿಸಿಬಿಸಿ ಅನ್ನ, ಕುರಿ ಮಾಂಸದ ಘಮ್ಮೆನ್ನುವ ಸಾರು ಬಡಿಸಿದ್ದರು.

'ಇಂಥ ಮನುಷ್ಯ ರಾಜನಾದರೆ ಪ್ರಜೆಗಳು ನೆಮ್ಮದಿಯಿಂದ ಬದುಕಬಲ್ಲರು' ಎಂದು ಎಲ್ಲರೂ ಷರೀಫನೆಂಬ ಅನ್ನದಾತನನ್ನು ಕೊಂಡಾಡಿದ್ದರು. ಹಮೀದಾ ಬೇಗಂ ಮಗನಿಗೆ ಸ್ವಲ್ಪ ಅನ್ನವನ್ನು, ಒಂದು ಮಾಂಸದ ತುಂಡನ್ನು ತಿನ್ನಿಸಿದಳು. ಜ್ವರದ ಕಾರಣದಿಂದಾಗಿ ತಿನ್ನಲು ಪ್ರಯಾಸ ಪಡುತ್ತಿದ್ದ ಮಗನನ್ನು ನೋಡಿ ಅವಳಿಗೆ ಊಟ ಮಾಡಲು ಮನಸ್ಸಾಗಲಿಲ್ಲ. ಈ ಸಂಗತಿಯನ್ನು ಅರಿತ ಪಕ್ಕದಲ್ಲೇ ಕುಳಿತಿದ್ದ ತನ್ನನ್ನು ಇಲ್ಲಿಗೆ ಕರೆದುಕೊಂಡು ಬಂದಿದ್ದ ಬೇಕರಿಯ ಯಜಮಾನ 'ಮಗನನ್ನು ಹೊತ್ತು ನಡೆಯಲಾದರೂ ಶಕ್ತಿ ಬೇಕಾಗುತ್ತದೆ ಮಗಳೇ. ನೀನು ಹೊಟ್ಟೆ ತುಂಬಾ ಊಟ ಮಾಡು. ನಿಜ ಹೇಳಬೇಕೆಂದರೆ ನಾವು ಇಂಥ ಊಟ ಮಾಡಿ ಬಹಳ ದಿನಗಳೇ ಆಗಿದ್ದವು. ಕರುಳಿನಲ್ಲಿ ಶಕ್ತಿಯಿದ್ದರೆ ಮಾತ್ರ ನಾವು ಮತ್ತೊಬ್ಬರಿಗೆ ಸಹಾಯ ಮಾಡಲು ಸಾಧ್ಯ. ಹೃದಯ ತುಂಬಿದ ಈ ಅಮಾನುಲ್ಲಾ ಷರೀಫ ಎಷ್ಟು ಹೊಟ್ಟೆಗಳನ್ನು ತುಂಬಿಸುತ್ತಿದ್ದಾನೆ ನೋಡು...' ಬೇಕರಿ ಯಜಮಾನನ ಮಾತುಗಳಿಂದ ಸ್ವಲ್ಪ ಸಮಾಧಾನಗೊಂಡವಳು, ಹೊಟ್ಟೆ ತುಂಬಾ ಮನ್ಸಾಫ್ ಊಟವನ್ನು ಮಾಡಿದಳು. ಮಗನೊಂದಿಗೆ ಪಡಸಾಲೆಯಲ್ಲಿ ಮಲಗಿದಳು. ಯಾರೋ ತಂದುಕೊಟ್ಟ ಜ್ವರದ ಔಷಧಿಯನ್ನು ಮಗನಿಗೆ ಕುಡಿಸಿದಳು.

ಸೂರ್ಯ ಹುಟ್ಟುವ ಮೊದಲೇ ಎದ್ದು ಸುಮಾರು ಜನ ಪ್ರಯಾಣ ಬೆಳೆಸಿದ್ದರು. ರಾತ್ರಿ ಕಡಿಮೆಯಾಗಿದ್ದ ಮಗನ ಜ್ವರ ಈಗ ಜಾಸ್ತಿಯಾಗಿತ್ತು. ಮಗನನ್ನು ಹೊತ್ತೇ ಹಮೀದಾ ರಸ್ತೆಯ ಮೇಲೆ ಭಾರವಾದ ಹೆಜ್ಜೆ ಇಡತೊಡಗಿದಳು. ಏನಾದರಾಗಲೀ ತನ್ನ ಮಗನನ್ನು ಅವನ ಅಪ್ಪನ ಮಡಿಲಿಗೆ ಹಾಕಬೇಕೆಂಬ ದೃಢವಾದ ಹಂಬಲ ಅವಳಲ್ಲಿ ಬೇರೂರಿದ್ದರಿಂದ ಅವಳ ಕಾಲುಗಳು ಅಗಾಧವಾದ ಬಲ ತುಂಬಿಕೊಂಡಿದ್ದವು. ತುಂಬಾ ಪ್ರಯಾಸದಿಂದ ಅವಳು ನಿರಾಶ್ರಿತರ ಶಿಬಿರ ತಲುಪಿದಾಗ ಸೂರ್ಯ ಮುಳುಗಿ ಕತ್ತಲು ಆವರಿಸಿಕೊಂಡಿತ್ತು.

ನಿರಾಶ್ರಿತರ ಶಿಬಿರ ನರಕಸದೃಶವಾಗಿತ್ತು. ದಾಳಿಗಳಿಂದ ತೀವ್ರವಾಗಿ ಗಾಯಗೊಂಡವರ, ತಂದೆ ತಾಯಿಗಳನ್ನು ಕಳೆದುಕೊಂಡವರ, ಮಕ್ಕಳನ್ನು ಕಳೆದುಕೊಂಡವರ, ಆಸ್ತಿಪಾಸ್ತಿಗಳನ್ನು ಕಳೆದುಕೊಂಡವರ ಆಕ್ರಂದನಗಳು ಹೇಳತೀರದಂತಿದ್ದವು. ಅಲ್ಲಿನ ಬಹುತೇಕ ಎಲ್ಲರೂ ಯುದ್ಧವನ್ನು ಮತ್ತು ಯುದ್ಧಕ್ಕೆ ಕಾರಣರಾದವರನ್ನು ಇನ್ನಿಲ್ಲದಂತೆ ಶಪಿಸುತ್ತಿದ್ದರು. ಆಹಾರ ಮತ್ತು ಔಷಧಿಗಳಿಗೇನೂ ಶಿಬಿರದಲ್ಲಿ ಬರವಿರಲಿಲ್ಲ. ಬೇರೆ ಬೇರೆ ದೇಶಗಳಿಂದ ಪರಿಹಾರ ಸಾಮಗ್ರಿಗಳು ಶಿಬಿರಕ್ಕೆ ಬಂದು ತಲುಪುತ್ತಿದ್ದವು. ಹಮೀದಾಳಿಗೂ ಅವಳ ಮಗನಿಗೂ ಊಟ, ಹೊದಿಕೆ, ಔಷಧಿ ಎಲ್ಲವೂ ಲಭ್ಯವಾಗಿದ್ದವು. ಶಿಬಿರದಲ್ಲಿ ಒಬ್ಬರನ್ನೊಬ್ಬರು ಸಂತೈಸುವುದು, ಸುದ್ದಿ